ಸೂ. 38 | **47. ಮುಹಮ್ಮದ್** | ರು. 4

اٰیاتها ٣٨ سُوْرَةُ مُحَمَّدٍ مَدَنِيَّةٌ رکوعاتها ٤

(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಸತ್ಯವನ್ನು ನಿರಾಕರಿಸಿದವರ ಹಾಗೂ ಅಲ್ಲಾಹನ ಮಾರ್ಗದಿಂದ ತಡೆದವರ ಕರ್ಮಗಳನ್ನು ಅಲ್ಲಾಹನು ವ್ಯರ್ಥಗೊಳಿಸಿಬಿಟ್ಟನು-

اَلَّذِيْنَ كَفَرُوْا وَصَدُّوْا عَنْ سَبِيْلِ اللّٰهِ اَضَلَّ اَعْمَالَهُمْ ١

2. ಮತ್ತು ಸತ್ಯವಿಶ್ವಾಸ ಸ್ವೀಕರಿಸಿದ ಹಾಗೂ ಸತ್ಕರ್ಮ ಮಾಡಿದ, ಮುಹಮ್ಮದರ ಮೇಲೆ ಅವತೀರ್ಣಗೊಂಡದ್ದನ್ನು ಅವರ ಪ್ರಭುವಿನ ಕಡೆಯಿಂದ ಪರಮ ಸತ್ಯವಾದುದೆಂದು ನಂಬಿದವರ ಪಾಪಗಳನ್ನು ಅಲ್ಲಾಹನು ಅವರಿಂದ ದೂರೀಕರಿಸಿದನು ಮತ್ತು ಅವರ ಸ್ಥಿತಿಯನ್ನು ಸರಿ ಪಡಿಸಿದನು.

وَالَّذِيْنَ اٰمَنُوْا وَعَمِلُوا الصّٰلِحٰتِ وَاٰمَنُوْا بِمَا نُزِّلَ عَلٰى مُحَمَّدٍ وَّهُوَ الْحَقُّ مِنْ رَّبِّهِمْ ۙ كَفَّرَ عَنْهُمْ سَيِّاٰتِهِمْ وَاَصْلَحَ بَالَهُمْ ٢

3. ಇದೇಕೆಂದರೆ- ಸತ್ಯನಿಷೇಧಿಗಳು ಮಿಥ್ಯವನ್ನು ಅನುಸರಿಸಿದರು ಮತ್ತು ಸತ್ಯವಿಶ್ವಾಸಿಗಳು ಅವರ ಪ್ರಭುವಿನ ಕಡೆಯಿಂದ ಬಂದಿರುವ ಸತ್ಯವನ್ನು ಅನುಸರಿಸಿದರು. ಈ ರೀತಿಯಲ್ಲಿ ಅಲ್ಲಾಹನು ಜನರಿಗೆ ಅವರ ಸರಿಯಾದ ನೆಲೆಯನ್ನು ತಿಳಿಸಿ ಬಿಡುತ್ತಾನೆ.

ذٰلِكَ بِاَنَّ الَّذِيْنَ كَفَرُوا اتَّبَعُوا الْبَاطِلَ وَاَنَّ الَّذِيْنَ اٰمَنُوا اتَّبَعُوا الْحَقَّ مِنْ رَّبِّهِمْ ۭ كَذٰلِكَ يَضْرِبُ اللّٰهُ لِلنَّاسِ اَمْثَالَهُمْ ٣

4. ಆದುದರಿಂದ ಈ ಸತ್ಯನಿಷೇಧಿಗಳನ್ನು ಯುದ್ಧದಲ್ಲಿ ನೀವು ಎದುರಿಸಿದಾಗ, ಪ್ರಥಮ ಕೆಲಸ ಕತ್ತು ಕಡಿಯುವುದಾಗಿರುತ್ತದೆ. ನೀವು ಅವರನ್ನು ಚೆನ್ನಾಗಿ ಸದೆಬಡಿದ ಬಳಿಕ ಕೈದಿಗಳನ್ನು ಬಿಗಿಯಾಗಿ ಕಟ್ಟಿರಿ. ಆ ಬಳಿಕ ನೀವು ಅವರ ಮೇಲೆ ಸೌಜನ್ಯ ತೋರಬಹುದು ಅಥವಾ ಪರಿಹಾರಧನ ಸ್ವೀಕರಿಸಬಹುದು. ಇದು ಯುದ್ಧ ಮುಗಿಯುವ ತನಕ.[1] ಇದು ನೀವು ಮಾಡಬೇಕಾದ

فَاِذَا لَقِيْتُمُ الَّذِيْنَ كَفَرُوْا فَضَرْبَ الرِّقَابِ ۭ حَتّٰٓى اِذَآ اَثْخَنْتُمُوْهُمْ فَشُدُّوا الْوَثَاقَ ڎ فَاِمَّا مَنًّۢا بَعْدُ وَاِمَّا فِدَاۗءً حَتّٰى تَضَعَ الْحَرْبُ اَوْزَارَهَا ڔ ذٰلِكَ ڕ مع

1. ಈ ಸೂಕ್ತದ ಪದಗಳು ಮತ್ತು ಅವತೀರ್ಣದ ಹಿನ್ನೆಲೆಯನ್ನು ಗಮನಿಸಿದರೆ ಇದು ಯುದ್ಧದ ಆದೇಶ ಬಂದ ನಂತರ ಮತ್ತು ಯುದ್ಧ ಆರಂಭಗೊಳ್ಳುವುದಕ್ಕೆ ಮೊದಲು ಅವತೀರ್ಣಗೊಂಡಿತ್ತು ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. "ಸತ್ಯನಿಷೇಧಿಗಳನ್ನು ಯುದ್ಧದಲ್ಲಿ ನೀವು ಎದುರಿಸಿದಾಗ" ಎಂಬ ಪದಗಳು ಇನ್ನೂ ಯುದ್ಧ ಸಂಭವಿಸಿಲ್ಲ ಎಂಬುದಕ್ಕೆ ಆಧಾರ ಒದಗಿಸುತ್ತದೆ. ಅದಕ್ಕೆ ಮೊದಲೇ, ಯುದ್ಧ ಆರಂಭಗೊಂಡರೆ ಮುಸ್ಲಿಮರು ಮೊಟ್ಟಮೊದಲು ಶತ್ರುಗಳ ಹೋರಾಟದ ಶಕ್ತಿಯನ್ನು ಸಂಪೂರ್ಣವಾಗಿ ಉಡುಗಿಸಲು ಮೊದಲ ಗಮನ

ಕಾರ್ಯ. ಅಲ್ಲಾಹನಿಚ್ಛಿಸುತ್ತಿದ್ದರೆ ಸ್ವತಃ ಅವನೇ ಅವರನ್ನು ನೋಡಿಕೊಳ್ಳುತ್ತಿದ್ದನು. ಆದರೆ, ನಿಮ್ಮನ್ನು ಪರಸ್ಪರರ ಮೂಲಕ ಪರೀಕ್ಷಿಸಲಿಕ್ಕಾಗಿ (ಅವನು ಈ ಕ್ರಮ ಕೈಗೊಂಡನು).[2] ಅಲ್ಲಾಹನು, ತನ್ನ ಮಾರ್ಗದಲ್ಲಿ ಹತರಾಗುವವರ ಕರ್ಮಗಳನ್ನು ಖಂಡಿತ ವ್ಯರ್ಥಗೊಳಿಸಲಾರನು.

وَلَوْ يَشَآءُ اللّٰهُ لَانْتَصَرَ مِنْهُمْ وَلٰكِنْ
لِّيَبْلُوَا۟ بَعْضَكُمْ بِبَعْضٍ ۗ وَالَّذِيْنَ قُتِلُوْا
فِيْ سَبِيْلِ اللّٰهِ فَلَنْ يُّضِلَّ اَعْمَالَهُمْ ﴿٤﴾

5. ಅವನು ಅವರಿಗೆ ಮಾರ್ಗದರ್ಶನ ಮಾಡುವನು.[3] ಅವರ ಸ್ಥಿತಿಯನ್ನು ಸುಧಾರಿಸುವನು ಮತ್ತು-

سَيَهْدِيْهِمْ وَيُصْلِحُ بَالَهُمْ ﴿٥﴾

6. ಅವನು ಅವರಿಗೆ ಪರಿಚಯಿಸಿರುವಂತಹ ಸ್ವರ್ಗದಲ್ಲಿ ಅವರನ್ನು ಪ್ರವೇಶ ಗೊಳಿಸುವನು.

وَيُدْخِلُهُمُ الْجَنَّةَ عَرَّفَهَا لَهُمْ ﴿٦﴾

7. ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಸಹಾಯ ಮಾಡಿದರೆ, ಅವನು ನಿಮಗೆ ಸಹಾಯ ಮಾಡುವನು[4] ಮತ್ತು ನಿಮ್ಮ ಪಾದಗಳನ್ನು ಸ್ಥಿರಗೊಳಿಸುವನು.

يٰۤاَيُّهَا الَّذِيْنَ اٰمَنُوْۤا اِنْ تَنْصُرُوا اللّٰهَ
يَنْصُرْكُمْ وَيُثَبِّتْ اَقْدَامَكُمْ ﴿٧﴾

8. ಇನ್ನು ಸತ್ಯನಿಷೇಧಿಗಳ ವಿಷಯ. ಅವರಿಗಂತೂ ವಿನಾಶ ಕಾದಿದೆ ಮತ್ತು ಅಲ್ಲಾಹನು ಅವರ ಕರ್ಮಗಳನ್ನು ಭ್ರಷ್ಟಗೊಳಿಸಿ ಬಿಟ್ಟಿರುವನು.

وَالَّذِيْنَ كَفَرُوْا فَتَعْسًا لَّهُمْ وَاَضَلَّ
اَعْمَالَهُمْ ﴿٨﴾

9. ಏಕೆಂದರೆ ಅವರು ಅಲ್ಲಾಹನು ಅವತೀರ್ಣಗೊಳಿಸಿದುದನ್ನು ಇಷ್ಟಪಡಲಿಲ್ಲ. ಆದುದರಿಂದ ಅಲ್ಲಾಹನು ಅವರ ಕರ್ಮಗಳನ್ನು ವ್ಯರ್ಥಗೊಳಿಸಿಬಿಟ್ಟನು.

ذٰلِكَ بِاَنَّهُمْ كَرِهُوْا مَاۤ اَنْزَلَ اللّٰهُ
فَاَحْبَطَ اَعْمَالَهُمْ ﴿٩﴾

10. ಅವರಿಗಿಂತ ಮುಂಚೆ ಗತಿಸಿದವರ ಗತಿಯೇನಾಯಿತೆಂಬುದನ್ನು

اَفَلَمْ يَسِيْرُوْا فِى الْاَرْضِ فَيَنْظُرُوْا
كَيْفَ كَانَ عَاقِبَةُ الَّذِيْنَ مِنْ

ಹರಿಸಬೇಕು ಎಂಬ ನಿರ್ದೇಶವನ್ನು ಕೊಡಲಾಗುತ್ತಿದೆ. ಅನಂತರ ಬಂಧಿಸಲ್ಪಟ್ಟವರಿಗೆ ಸಂಬಂಧಿಸಿದಂತೆ ಅವರನ್ನು ಪರಿಹಾರ ಧನ ಪಡೆದು ಅಥವಾ ಕೈದಿಗಳ ವಿನಿಮಯದ ಮೂಲಕ ಬಿಟ್ಟು ಬಿಡುವ, ಅಥವಾ ಸೆರೆವಾಸದಲ್ಲಿಟ್ಟು ಅವರೊಂದಿಗೆ ಔದಾರ್ಯದ ಧೋರಣೆ ಕೈಗೊಳ್ಳುವ ಅಥವಾ ಔದಾರ್ಯ ತೋರಿ ಬಂಧಮುಕ್ತಗೊಳಿಸುವುದರ ಪೈಕಿ ಯಾವುದನ್ನು ಬೇಕಾದರೂ ಅನುಸರಿಸಲು ಮುಸ್ಲಿಮರಿಗೆ ಹಕ್ಕಿದೆ.

2. ಅರ್ಥಾತ್- ಮಿಥ್ಯವಾದಿಗಳನ್ನು ಸದೆಬಡಿಯುವುದಷ್ಟೇ ಅಲ್ಲಾಹನ ಉದ್ದೇಶವಾಗಿದ್ದರೆ ಈ ಕೆಲಸಕ್ಕಾಗಿ ಅವನಿಗೆ ನಿಮ್ಮ ಅವಶ್ಯಕತೆ ಇರಲಿಲ್ಲ. ಅವನ ಒಂದು ಭೂಕಂಪ ಅಥವಾ ಒಂದು ಚಂಡಮಾರುತ ಎವೆಯಿಕ್ಕುವುದರೊಳಗೆ ಈ ಕೆಲಸವನ್ನು ಮಾಡಿ ಮುಗಿಸುತ್ತಿತ್ತು. ಮಾನವರ ಪೈಕಿಯ ಸತ್ಯವಾದಿಗಳು ಮಿಥ್ಯವಾದಿಗಳೊಂದಿಗೆ ಸೆಣಸಾಡಬೇಕು. ಅವರ ವಿರುದ್ಧ ಜಿಹಾದ್ ಮಾಡಬೇಕೆಂದು ಅಲ್ಲಾಹನು ಬಯಸಿದ್ದನು. ಏಕೆಂದರೆ ಈ ಪರೀಕ್ಷೆಯ ಮೂಲಕ ಎಲ್ಲರಲ್ಲಿರುವ ಗುಣವಿಶೇಷತೆಗಳು ಹೊರಬೀಳಬೇಕು. ಅನಂತರ ಎಲ್ಲರೂ ತಂತಮ್ಮ ವರ್ತನೆಯ ಮೂಲಕ ಯಾವ ಸ್ಥಾನಮಾನಕ್ಕೆ ಅರ್ಹರೋ ಅದನ್ನು ಪಡೆಯಬೇಕು.

3. ಅರ್ಥಾತ್- ಸ್ವರ್ಗದೆಡೆಗೆ ಹೋಗಲು ಮಾರ್ಗದರ್ಶನ ಮಾಡುವನು.

4. ಅಲ್ಲಾಹನಿಗೆ ನೆರವಾಗುವುದೆಂದರೆ ಅಲ್ಲಾಹನ ವಚನವನ್ನು ಉನ್ನತಗೊಳಿಸುವ ಮತ್ತು ಸತ್ಯದ ಉತ್ತುಂಗದ ಕೆಲಸದಲ್ಲಿ ಭಾಗಿಯಾಗುವುದು.

ಕಂಡುಕೊಳ್ಳಲು ಅವರು ಭೂಮಿಯಲ್ಲಿ ಸಂಚರಿಸಲಿಲ್ಲವೇ? ಅಲ್ಲಾಹನು ಅವರ ಸರ್ವಸ್ವವನ್ನೂ ಧ್ವಂಸ ಗೊಳಿಸಿದನು. ಈ ಸತ್ಯನಿಷೇಧಿಗಳಿಗೆ ಇಂತಹದೇ ಗತಿ ವಿಧಿಸಲ್ಪಟ್ಟಿದೆ.[5]

قَبْلِهِمْ ۖ دَمَّرَ اللَّهُ عَلَيْهِمْ ۖ وَلِلْكَافِرِينَ
أَمْثَالُهَا ﴿١٠﴾

11. ಇದೇಕೆಂದರೆ ಸತ್ಯವಿಶ್ವಾಸಿಗಳ ಸಹಾಯಕನು ಅಲ್ಲಾಹನಾಗಿದ್ದಾನೆ ಮತ್ತು ಸತ್ಯನಿಷೇಧಿಗಳಿಗೆ ಯಾರೂ ಸಹಾಯಕರಿಲ್ಲ.

ذَٰلِكَ بِأَنَّ اللَّهَ مَوْلَى الَّذِينَ آمَنُوا
وَأَنَّ الْكَافِرِينَ لَا مَوْلَىٰ لَهُمْ ﴿١١﴾ ع

12. ಸತ್ಯವಿಶ್ವಾಸವನ್ನು ಸ್ವೀಕರಿಸಿ ಸತ್ಕರ್ಮವೆಸಗುವವರನ್ನು ಅಲ್ಲಾಹನು ತಳಭಾಗದಲ್ಲಿ ಕಾಲುವೆಗಳು ಹರಿಯುವಂತಹ ಸ್ವರ್ಗೋದ್ಯಾನ ಗಳಲ್ಲಿ ಪ್ರವೇಶಗೊಳಿಸುವನು. ಸತ್ಯನಿಷೇಧಿಗಳು ಕೆಲವೇ ದಿನಗಳ ಲೌಕಿಕ ಜೀವನದ ಸುಖವನ್ನು ಭೋಗಿಸುತ್ತಿದ್ದಾರೆ, ಪ್ರಾಣಿ ಗಳುಂಡಂತೆ ಉಣ್ಣುತ್ತಾರೆ, ನರಕವೇ ಅವರ ಅಂತಿಮ ನೆಲೆಯಾಗಿದೆ.

إِنَّ اللَّهَ يُدْخِلُ الَّذِينَ آمَنُوا وَ
عَمِلُوا الصَّالِحَاتِ جَنَّاتٍ تَجْرِي مِن
تَحْتِهَا الْأَنْهَارُ ۖ وَالَّذِينَ كَفَرُوا
يَتَمَتَّعُونَ وَيَأْكُلُونَ كَمَا تَأْكُلُ
الْأَنْعَامُ وَالنَّارُ مَثْوًى لَّهُمْ ﴿١٢﴾

13. ಸಂದೇಶವಾಹಕರೇ, ನಿಮ್ಮನ್ನು ಹೊರಹಾಕಿದ ನಾಡಿಗಿಂತ ಬಹಳಷ್ಟು ಬಲಿಷ್ಠವಾಗಿದ್ದ ಅದೆಷ್ಟೋ ನಾಡುಗಳು ಈ ಹಿಂದೆ ಗತಿಸಿವೆ.[6] ನಾವು ಅವರನ್ನು ನಾಶಗೊಳಿಸಿಬಿಟ್ಟೆವು. ಅವರನ್ನು ರಕ್ಷಿಸು ವವರಾರೂ ಇರಲಿಲ್ಲ.

وَكَأَيِّن مِّن قَرْيَةٍ هِيَ أَشَدُّ قُوَّةً مِّن
قَرْيَتِكَ الَّتِي أَخْرَجَتْكَ أَهْلَكْنَاهُمْ
فَلَا نَاصِرَ لَهُمْ ﴿١٣﴾

14. ತನ್ನ ಪ್ರಭುವಿನ ಕಡೆಯಿಂದ ಒಂದು ಸುಸ್ಪಷ್ಟ ಸನ್ಮಾರ್ಗದಲ್ಲಿರು ವವನು -ಯಾರ ಪಾಲಿಗೆ ಅವರ ದುಷ್ಕೃತ್ಯಗಳು ಸುಂದರ ಗೊಳಿಸಲ್ಪಟ್ಟಿವೆಯೋ ಮತ್ತು ಯಾರು ತಮ್ಮ ಸ್ವೇಚ್ಛೆಗಳ ಅನುಯಾಯಿಗಳಾಗಿ ಬಿಟ್ಟಿರುವರೋ- ಅವರಂತೆ ಆಗಬಲ್ಲನೇ?

أَفَمَن كَانَ عَلَىٰ بَيِّنَةٍ مِّن رَّبِّهِ كَمَن
زُيِّنَ لَهُ سُوءُ عَمَلِهِ وَاتَّبَعُوا
أَهْوَاءَهُم ﴿١٤﴾

15. ಧರ್ಮನಿಷ್ಠರಿಗೆ ವಾಗ್ದಾನ ಮಾಡಲಾಗಿರುವ ಆ ಸ್ವರ್ಗದ ವಿಶೇಷತೆ ಯೇನೆಂದರೆ ಅದರಲ್ಲಿ ತಿಳಿನೀರಿನ ಕಾಲುವೆಗಳು ಹರಿಯು ತ್ತಿರುವುವು, ಸ್ವಲ್ಪವೂ ರುಚಿ ಬದಲಾಗಿರದಂತಹ ಹಾಲಿನ ಕಾಲುವೆಗಳು ಹರಿಯುತ್ತಿರುವುವು. ಕುಡಿಯುವವರಿಗೆ ಅತ್ಯಂತ ರುಚಿಕರವಾಗಿರುವ ಮದಿರೆಯ ಕಾಲುವೆಗಳು ಹರಿಯುತ್ತಿರುವುವು, ಅತ್ಯಂತ ತಿಳಿಯಾದ ಜೇನಿನ ಕಾಲುವೆಗಳು ಹರಿಯುತ್ತಿರುವುವು.[7]

مَّثَلُ الْجَنَّةِ الَّتِي وُعِدَ الْمُتَّقُونَ ۖ فِيهَا
أَنْهَارٌ مِّن مَّاءٍ غَيْرِ آسِنٍ وَأَنْهَارٌ
مِّن لَّبَنٍ لَّمْ يَتَغَيَّرْ طَعْمُهُ وَأَنْهَارٌ
مِّنْ خَمْرٍ لَّذَّةٍ لِّلشَّارِبِينَ
وَأَنْهَارٌ مِّنْ عَسَلٍ مُّصَفًّى ۖ وَلَهُمْ

5. ಇದಕ್ಕೆ ಎರಡು ಅರ್ಥಗಳಿವೆ. ಒಂದನೆಯದಾಗಿ, ಆ ಸತ್ಯನಿಷೇಧಿಗಳು ಯಾವ ರೀತಿಯ ವಿನಾಶಕ್ಕೆ ಈಡಾದರೋ ಅಂತಹುದೇ ವಿನಾಶಕ್ಕೆ ಮುಹಮ್ಮದ್‌ರ(ಸ) ಸಂದೇಶವನ್ನು ಒಪ್ಪದ ಸತ್ಯನಿಷೇಧಿಗಳೂ ಈಡಾಗಲಿದ್ದಾರೆ. ಎರಡನೆಯದಾಗಿ ಲೌಕಿಕ ಜೀವನದ ಯಾತನೆಗಷ್ಟೇ ಅವರ ವಿನಾಶ ಸೀಮಿತವಾಗಿರಲಾರದು, ಬದಲಾಗಿ ಪರಲೋಕದಲ್ಲೂ ಅವರು ಅದೇ ಗತಿಯನ್ನು ಕಾಣುವರು.

6. ಅರ್ಥಾತ್- ಕುರೈಶರು ವಲಸೆ ಹೋಗುವಂತೆ ಪ್ರವಾದಿವರ್ಯರನ್ನು(ಸ) ನಿರ್ಬಂಧಿಸಿದ ಮಕ್ಕಾ ನಗರ.

7. ಪ್ರವಾದಿ ವಚನಗಳಲ್ಲಿ ಬಂದಿರುವ ವಿವರಣೆಯ ಪ್ರಕಾರ ಆ ಹಾಲು, ಜಾನುವಾರುಗಳ ಕೆಚ್ಚಲಿನಿಂದ ಹೊರಟ ಹಾಲಾಗಿರಲಾರದು. ಆ ಮದಿರೆಯು ಹಣ್ಣುಗಳನ್ನು ಕೊಳೆಯಿಸಿ ಭಟ್ಟಿಯಿಳಿಸಿದ ಮದಿರೆಯಾಗಿರಲಾರದು, ಹಾಗೆಯೇ ಆ ಜೇನು, ಜೇನ್ನೊಣದ ಹೊಟ್ಟೆಯಿಂದ ಹೊರಟ ಜೇನಾಗಿರಲಾರದು. ಬದಲಾಗಿ ಇದೆಲ್ಲವೂ ನೈಸರ್ಗಿಕ ಚಿಲುಮೆಗಳಿಂದ ಹೊರಹೊಮ್ಮುವುವು.

فِيهَا مِنْ كُلِّ الثَّمَرَاتِ وَمَغْفِرَةٌ مِّنْ رَّبِّهِمْ ۖ كَمَنْ هُوَ خَالِدٌ فِي النَّارِ وَسُقُوا مَاءً حَمِيمًا فَقَطَّعَ أَمْعَاءَهُمْ ﴿١٥﴾

ಅದರಲ್ಲಿ ಅವರಿಗಾಗಿ ಎಲ್ಲ ಬಗೆಯ ಫಲಗಳಿರುವುವು ಮತ್ತು ಅವರ ಪ್ರಭುವಿನ ಕಡೆಯಿಂದ ಕ್ಷಮೆ ಇರುವುದು. (ಇಂತಹ ಸ್ವರ್ಗ ಯಾರ ಪಾಲಿಗೆ ಬರಲಿದೆಯೋ ಅವನು) ಸದಾಕಾಲ ನರಕದಲ್ಲೇ ವಾಸಿಸಲಿರುವ ಮತ್ತು ಕರುಳುಗಳನ್ನು ಕತ್ತರಿಸಿ ಬಿಡುವಂತಹ ಕುದಿಯುವ ನೀರನ್ನು ಕುಡಿಸಲ್ಪಡಲಿರುವ ಜನರಿಗೆ ಸಮಾನನಾಗಬಲ್ಲನೇ?

وَمِنْهُمْ مَّنْ يَسْتَمِعُ إِلَيْكَ ۚ حَتَّىٰ إِذَا خَرَجُوا مِنْ عِنْدِكَ قَالُوا لِلَّذِينَ أُوتُوا الْعِلْمَ مَاذَا قَالَ آنِفًا ۚ أُولَٰئِكَ الَّذِينَ طَبَعَ اللَّهُ عَلَىٰ قُلُوبِهِمْ وَاتَّبَعُوا أَهْوَاءَهُمْ ﴿١٦﴾

16. ಇವರಲ್ಲಿ ಕೆಲವರು ನಿಮ್ಮ ಮಾತುಗಳನ್ನು ಕಿವಿಗೊಟ್ಟು ಕೇಳುತ್ತಾರೆ. ಆ ಬಳಿಕ ನಿಮ್ಮಲ್ಲಿಂದ ಹೊರಟು ಹೋದಾಗ, ಜ್ಞಾನದ ಅನುಗ್ರಹ ನೀಡಲ್ಪಟ್ಟವರೊಡನೆ, "ಈಗ ತಾನೆ ಇವರು ಹೇಳಿದ್ದೇನು?" ಎಂದು ಕೇಳುತ್ತಾರೆ.[8] ಅಲ್ಲಾಹನು ಮುದ್ರೆಯೊತ್ತಿರುವುದು ಇವರದೇ ಹೃದಯಗಳಿಗೆ ಮತ್ತು ಇವರು ತಮ್ಮ ಸ್ವೇಚ್ಛೆಗಳ ಅನುಯಾಯಿಗಳಾಗಿ ಬಿಟ್ಟಿರುವರು.

وَالَّذِينَ اهْتَدَوْا زَادَهُمْ هُدًى وَآتَاهُمْ تَقْوَاهُمْ ﴿١٧﴾

17. ಸನ್ಮಾರ್ಗ ಹೊಂದಿದವರಿಗೆ ಅಲ್ಲಾಹನು ಇನ್ನಷ್ಟು ಹೆಚ್ಚು ಮಾರ್ಗದರ್ಶನ ನೀಡುತ್ತಾನೆ ಮತ್ತು ಅವರಿಗೆ ಅವರ ಪಾಲಿನ 'ಧರ್ಮನಿಷ್ಠೆ'ಯನ್ನು ದಯಪಾಲಿಸುತ್ತಾನೆ.

فَهَلْ يَنْظُرُونَ إِلَّا السَّاعَةَ أَنْ تَأْتِيَهُمْ بَغْتَةً ۖ فَقَدْ جَاءَ أَشْرَاطُهَا ۚ فَأَنَّىٰ لَهُمْ إِذَا جَاءَتْهُمْ ذِكْرَاهُمْ ﴿١٨﴾

18. ಈಗ ಇವರೇನು, ಲೋಕಾಂತ್ಯವು ಹಠಾತ್ತನೆ ತಮ್ಮ ಮೇಲೆ ಬಂದೆರಗುವುದನ್ನು ಕಾಯುತ್ತಿರುವರೇ? ಅದರ ಕುರುಹುಗಳಂತು ಬಂದು ಬಿಟ್ಟಿವೆ. ಇನ್ನು ಅದುವೇ ಬಂದು ಬಿಟ್ಟಾಗ, ಇವರಿಗೆ ಉಪದೇಶ ಸ್ವೀಕರಿಸಲು ಯಾವ ಅವಕಾಶ ತಾನೇ ಉಳಿದಿರುವುದು?

فَاعْلَمْ أَنَّهُ لَا إِلَٰهَ إِلَّا اللَّهُ وَاسْتَغْفِرْ لِذَنْبِكَ وَلِلْمُؤْمِنِينَ وَالْمُؤْمِنَاتِ ۗ وَاللَّهُ يَعْلَمُ مُتَقَلَّبَكُمْ وَمَثْوَاكُمْ ﴿١٩﴾

19. ಆದುದರಿಂದ ಸಂದೇಶವಾಹಕರೇ, ಅಲ್ಲಾಹನ ಹೊರತು ಇತರ ಆರಾಧ್ಯರಾರೂ ಇಲ್ಲವೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿರಿ ಮತ್ತು ಕ್ಷಮೆ ಯಾಚಿಸಿರಿ. ನಿಮ್ಮ ತಪ್ಪಿಗಾಗಿಯೂ ಸತ್ಯವಿಶ್ವಾಸಿ ಸ್ತ್ರೀ-ಪುರುಷರಿಗಾಗಿಯೂ.[9] ಅಲ್ಲಾಹನು ನಿಮ್ಮ ಚಟುವಟಿಕೆಗಳನ್ನು ಬಲ್ಲನು ಮತ್ತು ನಿಮ್ಮ ಅಂತಿಮ ನೆಲೆಯನ್ನೂ ಬಲ್ಲನು.

8. ಇದು ಪ್ರವಾದಿವರ್ಯರ(ಸ) ಸಭೆಗಳಿಗೆ ಬಂದು ಕೂರುತ್ತಿದ್ದ ಸತ್ಯನಿಷೇಧಿಗಳು, ಕಪಟವಿಶ್ವಾಸಿಗಳು ಮತ್ತು ಗ್ರಂಥದವರ ಪ್ರಸ್ತಾಪವಾಗಿದೆ. ಅವರು ಪ್ರವಾದಿವರ್ಯರ(ಸ) ಮಾತುಗಳು ಮತ್ತು ಕುರ್‌ಆನಿನ ಸೂಕ್ತಗಳನ್ನು ಕೇಳುತ್ತಿದ್ದರು. ಆದರೆ ಅವರ ಮನಸ್ಸು ಪ್ರವಾದಿವರ್ಯರ(ಸ) ಬಾಯಿಯಿಂದ ಹೊರಡುತ್ತಿದ್ದ ವಿಷಯಗಳಿಂದ ದೂರವಿರುತ್ತಿತ್ತು. ಆದ್ದರಿಂದ ಅವರ ಪರಿಸ್ಥಿತಿ ಎಲ್ಲವನ್ನೂ ಕೇಳಿಯೂ ಏನೂ ಕೇಳದವರಂತಾಗಿರುತ್ತಿತ್ತು. ಸಭೆಯಿಂದ ಹೊರಬಂದ ಬಳಿಕ ಅವರು ಮುಸ್ಲಿಮರೊಡನೆ "ಈಗ ತಾನೇ ಅವರು ಹೇಳುತ್ತಿದ್ದುದೇನು?" ಎಂದು ಕೇಳುತ್ತಿದ್ದರು.

9. ದಾಸ ತನ್ನ ಪ್ರಭುವಿನ ದಾಸ್ಯ ಕೈಗೊಳ್ಳಲು ಮತ್ತು ಧರ್ಮಕ್ಕಾಗಿ ಜೀವದ ಹಂಗು ತೊರೆದು ಹೋರಾಡಲು ತನ್ನ ಮಟ್ಟಿಗೆ ಎಷ್ಟೇ ಪ್ರಯತ್ನ ಮಾಡಿದ್ದರೂ ನನ್ನ ಪಾಲಿನ ಕೆಲಸ ಮುಗಿಯಿತು ಎಂಬ ಭಾವನೆಯಲ್ಲಿರಬಾರದು. ನನಗೆ ನನ್ನ ಪ್ರಭುವಿನ ಮೇಲಿದ್ದ ಕರ್ತವ್ಯವನ್ನು ಈಡೇರಿಸಲು ಸಾಧ್ಯವಾಗಲಿಲ್ಲ ಎಂದೇ ಅವನು ಸದಾ ಭಾವಿಸುತ್ತಿರಬೇಕು. ಇದು ಇಸ್ಲಾಮ್ ಕಲಿಸಿರುವ ಶಿಷ್ಟಾಚಾರಗಳಲ್ಲೊಂದು. ಅವನು ಸದಾ ತನ್ನ ತಪ್ಪನ್ನು ಒಪ್ಪಿಕೊಂಡು, “ನಿನ್ನ ಸನ್ನಿಧಿಯಲ್ಲಿ ನನ್ನಿಂದ ಆಗಿರುವ ದೌರ್ಬಲ್ಯಗಳನ್ನು ಕ್ಷಮಿಸು” ಎಂದು

20. ಸತ್ಯವಿಶ್ವಾಸಿಗಳು,[10] (ಯುದ್ಧದ ಆಜ್ಞೆ ಕೊಡುವಂತಹ) ಒಂದು
ಅಧ್ಯಾಯ ಅವತೀರ್ಣ ಗೊಳಿಸಲ್ಪಡುವುದಿಲ್ಲವೇಕೆ? ಎಂದು
ಕೇಳುತ್ತಿದ್ದರು. ಆದರೆ ಯುದ್ಧದ ಪ್ರಸ್ತಾಪವಿದ್ದ ಸುದೃಢ ಅಧ್ಯಾ
ಯವೊಂದನ್ನು ಅವತೀರ್ಣಗೊಳಿಸಲಾದಾಗ, ಹೃದಯದೊಳಗೆ
ರೋಗವಿದ್ದವರು, ಮೃತ್ಯು ಆವರಿಸಿದವರು ನೋಡುವಂತೆ ನಿಮ್ಮ
ಕಡೆ ನೋಡುತ್ತಾರೆ. ಅಯ್ಯೋ ಅವರ ಪಾಡೇ!

وَيَقُولُ الَّذِينَ آمَنُوا لَوْلَا نُزِّلَتْ
سُورَةٌ ۚ فَإِذَا أُنْزِلَتْ سُورَةٌ مُحْكَمَةٌ
وَذُكِرَ فِيهَا الْقِتَالُ ۙ رَأَيْتَ الَّذِينَ
فِي قُلُوبِهِمْ مَرَضٌ يَنْظُرُونَ إِلَيْكَ
نَظَرَ الْمَغْشِيِّ عَلَيْهِ مِنَ الْمَوْتِ ۖ
فَأَوْلَىٰ لَهُمْ ﴿٢٠﴾

21. (ಅವರ ಬಾಯಲ್ಲಿರುವುದು) ಅನುಸರಣೆಯ ಕರಾರು ಹಾಗೂ
ಹಿತಮಾತು. ಆದರೆ ಖಚಿತ ಆದೇಶವು ನೀಡಲ್ಪಟ್ಟಾಗ ಅವರು
ಅಲ್ಲಾಹನೊಂದಿಗೆ ಮಾಡಿಕೊಂಡ ಕರಾರಿನಲ್ಲಿ ಸತ್ಯವಂತರಾಗಿರು
ತ್ತಿದ್ದರೆ ಅದು ಅವರಿಗೇ ಹಿತಕರವಾಗಿರುತ್ತಿತ್ತು.

طَاعَةٌ وَقَوْلٌ مَعْرُوفٌ ۚ فَإِذَا عَزَمَ
الْأَمْرُ فَلَوْ صَدَقُوا اللَّهَ لَكَانَ
خَيْرًا لَهُمْ ﴿٢١﴾

22. ನೀವು ವಿಮುಖರಾಗಿ ಬಿಟ್ಟರೆ ಭೂಮಿಯಲ್ಲಿ ಪುನಃ ಕ್ಷೋಭೆ
ಯನ್ನುಂಟು ಮಾಡುವ ಹಾಗೂ ಪರಸ್ಪರ ಕತ್ತು ಕೊಯ್ಯುವ
ಹೊರತು ನಿಮ್ಮಿಂದ ಬೇರೇನನ್ನಾದರೂ ನಿರೀಕ್ಷಿಸಬಹುದೇ?[11]

فَهَلْ عَسَيْتُمْ إِنْ تَوَلَّيْتُمْ أَنْ
تُفْسِدُوا فِي الْأَرْضِ وَتُقَطِّعُوا أَرْحَامَكُمْ ﴿٢٢﴾

23. ಅಲ್ಲಾಹನು ಶಪಿಸಿರುವುದು ಹಾಗೂ ಕಿವುಡರಾಗಿಯೂ ಕುರುಡ
ರಾಗಿಯೂ ಮಾಡಿ ಬಿಟ್ಟಿರುವುದು ಇವರನ್ನೇ.

أُولَٰئِكَ الَّذِينَ لَعَنَهُمُ اللَّهُ فَأَصَمَّهُمْ وَ
أَعْمَىٰ أَبْصَارَهُمْ ﴿٢٣﴾

24. ಅವರು ಕುರ್‌ಆನಿನ ಬಗ್ಗೆ ಚಿಂತನೆ ನಡೆಸಲಿಲ್ಲವೇ? ಅಥವಾ
ಅವರ ಹೃದಯಗಳಿಗೆ ಬೀಗಮುದ್ರೆ ಬಿದ್ದಿದೆಯೇ?

أَفَلَا يَتَدَبَّرُونَ الْقُرْآنَ أَمْ عَلَىٰ
قُلُوبٍ أَقْفَالُهَا ﴿٢٤﴾

25. ವಾಸ್ತವದಲ್ಲಿ ಸನ್ಮಾರ್ಗವು ಸ್ಪಷ್ಟಗೊಂಡ ಬಳಿಕ ಅದರಿಂದ
ವಿಮುಖರಾಗಿ ಬಿಟ್ಟವರಿಗೆ ಶೈತಾನನು ಈ ಧೋರಣೆಯನ್ನು
ಸುಲಭಗೊಳಿಸಿರುವನು ಮತ್ತು ಅವರಿಗಾಗಿ ಹುಸಿ ನಿರೀಕ್ಷೆಗಳ
ಸರಣಿಯನ್ನು ದೀರ್ಘಗೊಳಿಸಿರುವನು.

إِنَّ الَّذِينَ ارْتَدُّوا عَلَىٰ أَدْبَارِهِمْ
مِنْ بَعْدِ مَا تَبَيَّنَ لَهُمُ الْهُدَى ۙ
الشَّيْطَانُ سَوَّلَ لَهُمْ وَأَمْلَىٰ لَهُمْ ﴿٢٥﴾

ಪ್ರಾರ್ಥಿಸುತ್ತಿರಬೇಕು. "ಪ್ರವಾದಿಗಳೇ! ನಿಮ್ಮ ತಪ್ಪಿಗಾಗಿ ಕ್ಷಮೆ ಯಾಚಿಸಿರಿ" ಎಂಬ ಅಲ್ಲಾಹನ ವಾಣಿಯ ನಿಜವಾದ ಸ್ಫೂರ್ತಿಯೂ ಇದೇ ಆಗಿದೆ.

10. ನೈಜ ಮುಸ್ಲಿಮರು ಯುದ್ಧದ ಆಜ್ಞೆಯನ್ನು ಕಾತರದಿಂದ ಕಾಯುತ್ತಿದ್ದರು. ಆದರೆ ಕಪಟ ವಿಶ್ವಾಸದೊಂದಿಗೆ ಮುಸ್ಲಿಮರ ಗುಂಪಿನಲ್ಲಿ ಸೇರಿಕೊಂಡಿದ್ದ ಜನರಿಗೆ ಯುದ್ಧದ ಆಜ್ಞೆ ಬರುತ್ತಲೇ ಪ್ರಾಣವೇ ಹಾರಿ ಹೋದಂತಾಯಿತು.

11. ಈ ಮಾತಿನ ಅರ್ಥವೇನೆಂದರೆ - ಪ್ರವಾದಿವರ್ಯರು(ಸ) ಮತ್ತು ಸತ್ಯವಿಶ್ವಾಸಿಗಳು ಯಾವ ಉಜ್ವಲ ಸುಧಾರಣಾತ್ಮಕ ಕೆಲಸಕ್ಕಾಗಿ ಮತ್ತು ಇಸ್ಲಾಮಿನ ಪ್ರತಿರೋಧಕ್ಕಾಗಿ ತನು-ಮನ-ಧನದಿಂದ ಪ್ರಯತ್ನಿಸುತ್ತಿದ್ದರೋ ಅದರ ಬಗ್ಗೆ ನೀವು ಮೈಗಳ್ಳತನ ಪ್ರದರ್ಶಿಸಿದರೆ ಅದರ ಪರಿಣಾಮವಾಗಿ ನೀವು ಅದೇ ಅಜ್ಞಾನದಿಂದ ಕೂಡಿದ ವ್ಯವಸ್ಥೆಯೆಡೆಗೆ ಮರಳಬೇಕಾಗುತ್ತದೆ. ಅದರಲ್ಲಿ ನೀವು ಶತಮಾನಗಳಿಂದ ಪರಸ್ಪರರ ಕತ್ತು ಕೊಯ್ಯುತ್ತಾ ಬಿದ್ದುಕೊಂಡಿದ್ದಿರಿ. ಸ್ವಂತ ಮಕ್ಕಳನ್ನೇ ಜೀವಂತ ಹೂಳುತ್ತಿದ್ದಿರಿ. ದೇವನ ಭೂಮಿಯಲ್ಲಿ ಅಕ್ರಮ ಮತ್ತು ಕ್ಷೋಭೆಯನ್ನು ಹರಡುತ್ತಿದ್ದಿರಿ.

26. ಆದುದರಿಂದಲೇ ಅವರು ಅಲ್ಲಾಹನು ಅವತೀರ್ಣಗೊಳಿಸಿದ ಧರ್ಮವನ್ನು ಮೆಚ್ಚದವರೊಡನೆ, "ಕೆಲವು ವಿಷಯಗಳಲ್ಲಿ ನಾವು ನಿಮ್ಮನ್ನು ಅನುಸರಿಸುವೆವು" ಎಂದು ಹೇಳಿಬಿಟ್ಟರು.[12] ಅವರ ಈ ರಹಸ್ಯ ಮಾತುಗಳನ್ನು ಅಲ್ಲಾಹನು ಚೆನ್ನಾಗಿ ಬಲ್ಲನು.

ذٰلِكَ بِأَنَّهُمْ قَالُوا لِلَّذِينَ كَرِهُوا
مَا نَزَّلَ اللَّهُ سَنُطِيعُكُمْ فِي بَعْضِ
الْأَمْرِ ۖ وَاللَّهُ يَعْلَمُ إِسْرَارَهُمْ ﴿٢٦﴾

27. ದೇವಚರರು ಇವರ ಆತ್ಮಗಳನ್ನು ವಶಪಡಿಸಿಕೊಳ್ಳುವಾಗ ಮತ್ತು ಇವರ ಮುಖಗಳಿಗೂ ಬೆನ್ನುಗಳಿಗೂ ಹೊಡೆಯುತ್ತ ಇವರನ್ನು ಕೊಂಡೊಯ್ಯುವಾಗ ಇವರ ಅವಸ್ಥೆ ಏನಾದೀತು?

فَكَيْفَ إِذَا تَوَفَّتْهُمُ الْمَلَائِكَةُ يَضْرِبُونَ
وُجُوهَهُمْ وَأَدْبَارَهُمْ ﴿٢٧﴾

28. ಇವರು ಅಲ್ಲಾಹನನ್ನು ಕೋಪಗೊಳಿಸುವಂತಹ ಮಾರ್ಗವನ್ನು ಅನುಸರಿಸಿದರು ಮತ್ತು ಅವನ ಮೆಚ್ಚುಗೆಯ ಮಾರ್ಗವನ್ನು ಅನುಸರಿಸಲು ಇಷ್ಟ ಪಡಲಿಲ್ಲವೆಂಬ ಕಾರಣದಿಂದಲೇ ಹೀಗಾಗುವುದು. ಆದುದರಿಂದಲೇ ಅವನು ಇವರ ಸಕಲ ಕರ್ಮಗಳನ್ನು ನಿರರ್ಥಕಗೊಳಿಸಿ ಬಿಟ್ಟನು.[13]

ذٰلِكَ بِأَنَّهُمُ اتَّبَعُوا مَا أَسْخَطَ اللَّهَ وَ
كَرِهُوا رِضْوَانَهُ فَأَحْبَطَ أَعْمَالَهُمْ ﴿٢٨﴾ ع

29. ಹೃದಯಗಳಲ್ಲಿ ರೋಗವುಳ್ಳವರು, ಅಲ್ಲಾಹನು ಅವರ ಹೃದಯಗಳ ಮಾಲಿನ್ಯವನ್ನು ವ್ಯಕ್ತಗೊಳಿಸಲಾರನೆಂದು ಭಾವಿಸಿಕೊಂಡಿರುವರೇ?

أَمْ حَسِبَ الَّذِينَ فِي قُلُوبِهِمْ مَرَضٌ
أَنْ لَنْ يُخْرِجَ اللَّهُ أَضْغَانَهُمْ ﴿٢٩﴾

30. ನಾವಿಚ್ಛಿಸಿದರೆ ಅವರನ್ನು ನಿಮಗೆ ಕಣ್ಣಾರೆ ತೋರಿಸುವೆವು. ಆಗ ನೀವು ಅವರನ್ನು ಅವರ ಮುಖಭಾವಗಳಿಂದಲೇ ಗುರುತಿಸಬಲ್ಲಿರಿ. ಅವರು ಮಾತನಾಡುವ ರೀತಿಯಿಂದಂತೂ ನೀವು ಅವರನ್ನು ಗುರುತಿಸಿಯೇ ತೀರುವಿರಿ. ಅಲ್ಲಾಹನು ನಿಮ್ಮೆಲ್ಲರ ಕರ್ಮಗಳನ್ನು ಚೆನ್ನಾಗಿ ಬಲ್ಲನು.

وَلَوْ نَشَاءُ لَأَرَيْنَاكَهُمْ فَلَعَرَفْتَهُمْ
بِسِيمَاهُمْ ۚ وَلَتَعْرِفَنَّهُمْ فِي لَحْنِ
الْقَوْلِ ۚ وَاللَّهُ يَعْلَمُ أَعْمَالَكُمْ ﴿٣٠﴾

31. ನಿಮ್ಮಲ್ಲಿ ಧರ್ಮಯೋಧರೂ ಸ್ಥೈರ್ಯವುಳ್ಳವರೂ ಯಾರೆಂದು ನೋಡಲಿಕ್ಕಾಗಿ ಹಾಗೂ ನಿಮ್ಮ ಸ್ಥಿತಿಯನ್ನು ಅಳೆಯಲಿಕ್ಕಾಗಿ ನಾವು ಖಂಡಿತವಾಗಿಯೂ ನಿಮ್ಮನ್ನು ಪರೀಕ್ಷೆಗೆ ಒಳಪಡಿಸುವೆವು.

وَلَنَبْلُوَنَّكُمْ حَتَّىٰ نَعْلَمَ الْمُجَاهِدِينَ
مِنْكُمْ وَالصَّابِرِينَ ۙ وَنَبْلُوَ أَخْبَارَكُمْ ﴿٣١﴾

12. ಅರ್ಥಾತ್- ವಿಶ್ವಾಸವನ್ನು ಪ್ರಕಟಿಸಿ ಮುಸ್ಲಿಮರ ಕೂಟದೊಂದಿಗೆ ಸೇರಿದ ನಂತರವೂ ಅವರು ಒಳಗೊಳಗೇ ಇಸ್ಲಾಮಿನ ಶತ್ರುಗಳೊಂದಿಗೆ ಸೇರಿ ಸಂಚುಗಳನ್ನು ಹೂಡುತ್ತಿದ್ದರು. ಕೆಲವು ವಿಷಯಗಳಲ್ಲಿ ನಾವು ನಿಮ್ಮ ಜತೆಗಿದ್ದೇವೆ ಎಂದು ಅವರೊಡನೆ ವಾಗ್ದಾನ ಮಾಡುತ್ತಿದ್ದರು.

13. ಕರ್ಮಗಳು ಎಂದರೆ ಮುಸ್ಲಿಮರಾಗಿ ಅವರು ನಿರ್ವಹಿಸುತ್ತಿದ್ದ ಕರ್ಮಗಳು. ಅವರ ನಮಾಝ್, ಉಪವಾಸ ವ್ರತ, ಅವರ ಝಕಾತ್ ಮತ್ತು ಮೇಲ್ನೋಟಕ್ಕೆ ಸತ್ಕರ್ಮಗಳೆಂದು ಪರಿಗಣಿಸಲ್ಪಡುವ ಎಲ್ಲಾ ಆರಾಧನೆ ಮತ್ತು ಒಳಿತುಗಳು ನಷ್ಟವಾದವು. ಏಕೆಂದರೆ ಮುಸ್ಲಿಮರಾಗಿಯೂ ಅಲ್ಲಾಹ್, ಅವನ ಧರ್ಮ ಮತ್ತು ಮುಸ್ಲಿಮ್ ಸಮಾಜದ ಜತೆಗೆ ಅವರು ಪ್ರಾಮಾಣಿಕತೆ ಮತ್ತು ನಿಷ್ಠೆಯ ಧೋರಣೆ ಅನುಸರಿಸಲಿಲ್ಲ. ಕೇವಲ ತಮ್ಮ ಲೌಕಿಕ ಹಿತಕ್ಕಾಗಿ ಧರ್ಮವಿರೋಧಿಗಳ ಜತೆಗೆ ಸೇರಿ ಸಂಚು ಹೂಡಿದರು. ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕಾದ ಸಂದರ್ಭ ಬಂದಾಗ ತಮ್ಮನ್ನು ಅಪಾಯದಿಂದ ರಕ್ಷಿಸಿಕೊಳ್ಳುವ ಬಗ್ಗೆ ಚಿಂತಾಮಗ್ನರಾದರು.

32. ಸನ್ಮಾರ್ಗವು ಸ್ಪಷ್ಟವಾಗಿ ತಿಳಿದ ಬಳಿಕವೂ ಸತ್ಯವನ್ನು ನಿರಾಕರಿಸಿದವರು, ಅಲ್ಲಾಹನ ಮಾರ್ಗದಿಂದ ತಡೆದವರು ಮತ್ತು ಸಂದೇಶವಾಹಕರೊಡನೆ ಜಗಳವಾಡಿದವರು- ವಾಸ್ತವದಲ್ಲಿ ಅವರು ಅಲ್ಲಾಹನಿಗೆ ಯಾವ ಹಾನಿಯನ್ನೂ ಮಾಡಲಾರರು, ಅವರು ಮಾಡಿದ್ದೆಲ್ಲವನ್ನೂ ಅಲ್ಲಾಹನೇ ಅಳಿಸಿ ಬಿಡುವನು.

إِنَّ الَّذِينَ كَفَرُوا وَصَدُّوا عَن سَبِيلِ
اللَّهِ وَشَاقُّوا الرَّسُولَ مِن بَعْدِ مَا
تَبَيَّنَ لَهُمُ الْهُدَىٰ لَن يَضُرُّوا اللَّهَ
شَيْئًا وَسَيُحْبِطُ أَعْمَالَهُمْ ﴿٣٢﴾

33. ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಅನುಸರಿಸಿರಿ. ಸಂದೇಶವಾಹಕರನ್ನೂ ಅನುಸರಿಸಿರಿ ಮತ್ತು ನಿಮ್ಮ ಕರ್ಮಗಳನ್ನು ನಿರರ್ಥಕಗೊಳಿಸಬೇಡಿರಿ.[14]

يَا أَيُّهَا الَّذِينَ آمَنُوا أَطِيعُوا اللَّهَ وَ
أَطِيعُوا الرَّسُولَ وَلَا تُبْطِلُوا أَعْمَالَكُمْ ﴿٣٣﴾

34. ಸತ್ಯನಿಷೇಧಿಗಳನ್ನೂ ದೇವಮಾರ್ಗದಿಂದ ತಡೆಯುವವರನ್ನೂ ಸಾಯುವ ವರೆಗೂ ಸತ್ಯನಿಷೇಧಿಗಳಾಗಿಯೇ ಇದ್ದವರನ್ನೂ ಅಲ್ಲಾಹನು ಖಂಡಿತ ಕ್ಷಮಿಸಲಾರನು.

إِنَّ الَّذِينَ كَفَرُوا وَصَدُّوا عَن سَبِيلِ
اللَّهِ ثُمَّ مَاتُوا وَهُمْ كُفَّارٌ فَلَن
يَغْفِرَ اللَّهُ لَهُمْ ﴿٣٤﴾

35. ಆದುದರಿಂದ ನೀವು ಅಂಜುಬುರುಕರಾಗಬೇಡಿರಿ ಮತ್ತು ಸಂಧಾನಕ್ಕಾಗಿ ನಿವೇದಿಸಬೇಡಿರಿ.[15] ನೀವೇ ವಿಜಯಿಗಳಾಗುವಿರಿ, ಅಲ್ಲಾಹನು ನಿಮ್ಮ ಜೊತೆಗಿದ್ದಾನೆ ಮತ್ತು ಅವನು ನಿಮ್ಮ ಕರ್ಮಗಳನ್ನು ಖಂಡಿತ ವ್ಯರ್ಥಗೊಳಿಸಲಾರನು.

فَلَا تَهِنُوا وَتَدْعُوا إِلَى السَّلْمِ وَ
أَنتُمُ الْأَعْلَوْنَ وَاللَّهُ مَعَكُمْ وَلَن
يَتِرَكُمْ أَعْمَالَكُمْ ﴿٣٥﴾

36. ಈ ಲೋಕದ ಜೀವನವಂತು ಕೇವಲ ಆಟ ಮತ್ತು ವಿನೋದವಾಗಿದೆ. ನೀವು ವಿಶ್ವಾಸವಿರಿಸಿ ಧರ್ಮನಿಷ್ಠೆಯ ನೀತಿಯನ್ನು ಅನುಸರಿಸುತ್ತಲಿದ್ದರೆ ಅಲ್ಲಾಹನು ನಿಮಗೆ ನಿಮ್ಮ ಪ್ರತಿಫಲವನ್ನು ನೀಡುವನು ಮತ್ತು ಅವನು ನಿಮ್ಮಿಂದ ನಿಮ್ಮ ಸಂಪತ್ತನ್ನು ಕೇಳಲಾರನು.[16]

إِنَّمَا الْحَيَاةُ الدُّنْيَا لَعِبٌ وَلَهْوٌ وَإِن
تُؤْمِنُوا وَتَتَّقُوا يُؤْتِكُمْ أُجُورَكُمْ
وَلَا يَسْأَلْكُمْ أَمْوَالَكُمْ ﴿٣٦﴾

37. ಒಂದು ವೇಳೆ ಅವನು ನಿಮ್ಮಿಂದ ನಿಮ್ಮ ಸಂಪತ್ತನ್ನು ಕೇಳಿದರೆ ಮತ್ತು ನಿಮ್ಮಿಂದ ಸರ್ವಸ್ವವನ್ನೂ ಅಪೇಕ್ಷಿಸಿದರೆ ನೀವು ಜಿಪುಣತೆ

إِن يَسْأَلْكُمُوهَا فَيُحْفِكُمْ تَبْخَلُوا وَ

14. ಬೇರೆ ಮಾತುಗಳಲ್ಲಿ ಹೇಳುವುದಾದರೆ ಕರ್ಮಗಳು ಪರಿಣಾಮಕಾರಿ ಮತ್ತು ಫಲಪ್ರದವಾಗುವುದು ಅಲ್ಲಾಹ್ ಮತ್ತು ಅವನ ಪ್ರವಾದಿಯ ಅನುಸರಣೆಯನ್ನೇ ಆಧರಿಸಿದೆ. ಅನುಸರಣೆಯಿಂದ ವಿಮುಖವಾದ ಬಳಿಕ ಯಾವ ಕರ್ಮವೂ ಸತ್ಕರ್ಮವಾಗಿ ಉಳಿಯುವುದಿಲ್ಲ ಮತ್ತು ವ್ಯಕ್ತಿ ಯಾವುದೇ ರೀತಿಯ ಪ್ರತಿಫಲಕ್ಕೆ ಬಾಧ್ಯಸ್ಥನಾಗುವುದಿಲ್ಲ.

15. ಮದೀನಾದ ಸಣ್ಣ ಗ್ರಾಮದಲ್ಲಿ ಕೆಲವು ನೂರು ಮುಹಾಜಿರ್ ಮತ್ತು ಅನ್ಸಾರ್‌ಗಳು ಮಾತ್ರ ಇಸ್ಲಾಮಿನ ಧ್ವಜವಾಹಕರಾಗಿದ್ದ ಕಾಲದಲ್ಲಿ ಈ ಮಾತು ಹೇಳಲಾಗಿದೆ ಎಂಬುದು ಗಮನಾರ್ಹ. ಕುರೈಶರ ಬಲಿಷ್ಠ ಶಕ್ತಿ ಮತ್ತು ಸಮಸ್ತ ಅರಬ್ ರಾಷ್ಟ್ರದ ಸತ್ಯನಿಷೇಧಿಗಳನ್ನು ಅವರು ಎದುರಿಸಬೇಕಾಗಿತ್ತು. ಆ ಸಂದರ್ಭದಲ್ಲಿ ಅಧೀರರಾಗಿ ಶತ್ರುಗಳೊಂದಿಗೆ ಸಂಧಾನದ ಬೇಡಿಕೆಯನ್ನು ಮುಂದಿರಿಸದಿರಿ, ಬದಲಾಗಿ ಪ್ರಾಣದ ಹಂಗು ತೊರೆದು ಹೋರಾಡಲು ಸಿದ್ಧರಾಗಿರಿ ಎಂದು ಅವರೊಡನೆ ಹೇಳಲಾಗುತ್ತಿದೆ.

16. ಅರ್ಥಾತ್- ಅವನು ನಿರಪೇಕ್ಷನು. ತನಗಾಗಿ ನಿಮ್ಮಿಂದ ಏನನ್ನಾದರೂ ಪಡೆಯುವ ಅವಶ್ಯಕತೆ, ಅವನಿಗಿಲ್ಲ. ತನ್ನ ಮಾರ್ಗದಲ್ಲಿ ಖರ್ಚು ಮಾಡಲು ಅವನು ನಿಮ್ಮಿಂದ ಬಯಸುತ್ತಿದ್ದರೆ ಅದರ ಉದ್ದೇಶ ನಿಮ್ಮ ಹಿತವೇ ಆಗಿದೆ.

يُخْرِجْ اَضْغَانَكُمْ ﴿٣٧﴾

ತೋರುವಿರಿ ಮತ್ತು ಅವನು ನಿಮ್ಮ ಮಾಲಿನ್ಯವನ್ನು ಹೊರಗೆಡಹುವನು.

هٰٓاَنْتُمْ هٰٓؤُلَآءِ تُدْعَوْنَ لِتُنْفِقُوْا
فِيْ سَبِيْلِ اللّٰهِۚ فَمِنْكُمْ مَّنْ يَّبْخَلُۚ
وَمَنْ يَّبْخَلْ فَاِنَّمَا يَبْخَلُ عَنْ
نَّفْسِهٖۗ وَاللّٰهُ الْغَنِيُّ وَاَنْتُمُ الْفُقَرَآءُۚ
وَاِنْ تَتَوَلَّوْا يَسْتَبْدِلْ قَوْمًا غَيْرَكُمْۙ
ثُمَّ لَا يَكُوْنُوْٓا اَمْثَالَكُمْ ﴿٣٨﴾

38. ನೋಡಿರಿ, ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಖರ್ಚು ಮಾಡಬೇಕೆಂದು ನಿಮಗೆ ಕರೆ ನೀಡಲಾಗುತ್ತಿದೆ. ಈ ಬಗ್ಗೆ ನಿಮ್ಮಲ್ಲಿ ಕೆಲವರು ಜಿಪುಣತೆ ತೋರುತ್ತಿದ್ದಾರೆ. ಜಿಪುಣತೆ ತೋರುವಾತನು ವಾಸ್ತವದಲ್ಲಿ ತನ್ನ ಮೇಲೆ ತಾನೇ ಜಿಪುಣತೆ ತೋರುತ್ತಿದ್ದಾನೆ. ಅಲ್ಲಾಹನಂತೂ ನಿರಪೇಕ್ಷನು. ನೀವೇ ಅವನ ಅವಲಂಬಿತರು. ನೀವು ವಿಮುಖರಾದರೆ ಅಲ್ಲಾಹನು ನಿಮ್ಮ ಸ್ಥಾನದಲ್ಲಿ ಬೇರಾವುದಾದರೂ ಜನಾಂಗವನ್ನು ತರುವನು ಮತ್ತು ಅವರು ನಿಮ್ಮಂತೆ ಇರಲಾರರು.